ಮಾಡ್ಕೊಂಡೆ ಹೇಳಿದಳು, ಆದರೆ, ಧ್ವನಿ ಬಹಳ ದೃಢವಾಗಿತ್ತು. ಮತ್ತೆ ಉಳಿದ ಪಾರ್ಲರ್‌ನ ಹುಡುಗಿಯರ ನಡುವೆ ಗುಸುಗುಸು ಶುರುವಾಯಿತು.

ಪಾರ್ಲರ್‌ನ ಯಜಮಾನಿ ಜಿದ್ದಿಗೆ ಬಿದ್ದವಳಂತೆ ನುಡಿದಳು, “ನೀನು ಕೆಟ್ಟ ಕೆಲಸ ಮಾಡಲಿಲ್ಲ, ಒಳ್ಳೇದಾಯ್ತು, ಹಾಗಾದರೆ ನೀನೇ ಹೇಳು, ನಾನು ಒಂದಿನ ಮಗಳ ಮನೆಗೆ ಹೋಗಿದ್ದೆ, ಆ ಸಮಯದಲ್ಲೇ ನೀನ್ಯಾಕೆ ರಾತ್ರಿಹೊತ್ತು ಓಡೋದೆ? ನಾನು ನಿನ್ನ ಹತ್ತಿರ ಮನೆ ಬೀಗದ ಕೀ ಕೊಟ್ಟಿದ್ದೆ. ನಾನು ಎಷ್ಟು ನಂಬಿದ್ದೆ ನಿನ್ನ! ಪಾಪ! ನಿಮ್ಮ ಮಾಮ ಏನೂ ಗಮನಿಸುವುದಿಲ್ಲ, ತಮ್ಮ ಪಾಡಿಗೆ ತಾವಿರ್ತಾರೆ. ಅದಕ್ಕೆ ಅವರಿಗೆ ಕೀ ಕೊಡದೆ ನಿನಗೆ ಕೊಟ್ಟೆ. ಇದಕ್ಕೋಸ್ಕರ? ನೀನು ಆ ಬದ್ಮಾಶ್ ಜೊತೆ ರಾತ್ರಿಯೆಲ್ಲ ಇದ್ದು ಬಂದೆಯಾ? ಅವನು ನಿನ್ನ ಮದುವೆ ಮಾಡ್ಕೊತಾನೆ ಅಂತ ತಿಳ್ಕೊಂಡಿದ್ದಿಯಾ? ರಸ ಹೀರ್ಕೊಂಡು ಸಿಪ್ಪೆ ತರ ಬಿಸಾಕ್ತಾನೆ! ಸಾಕಷ್ಟು ನೋಡಿದಿನಿ, ಗೊತ್ತೆ?”

“ಇಲ್ಲ, ಅವನು ಬದ್ಮಾಶ್ ಅಲ್ಲ!”

“ನೀನು ನನಗೆ ಎದುರು ಮಾತಾಡ್ತಿಯಾ? ನಾನು ನಿನಗೆ ಜವಾಬ್ದಾರಿ ಕೊಟ್ಟಿದ್ದೆ, ಯಾಕೆ ಹೋಗಿದ್ದೆ? ನೀನೇನು ಮನುಷ್ಯಳೇ?”

ಜುಂಪಾ ಈಗ ತಲೆ ಎತ್ತಿದಳು, “ಅವನು ನನ್ನ ಮದುವೆ ಮಾಡ್ಕೊತಾನೆ ಮಾಮಿಮಾ, ನಾನು ಅವತ್ತು ಅವ್ನ ಜತೆ ಇರಲಿಲ್ಲ. ಅವರಕ್ಕನ ಮನೆ ಕಾಶಬಾದಲ್ಲಿದ್ದೆ, ಅಲ್ಲಿ ಅವರಕ್ಕನ ಮಗ್ಳೂ ಇದ್ಲು”.

“ಜುಂಪಾ, ಇಲ್ಯಾರೂ ನೆಲ ಮೂಸ್ಕೊಂಡು ಕೂತಿಲ್ಲ. ಯಾರೂ ನಿನ್ನ ಮಾತು ನಂಬೂದಿಲ್ಲ. ಹಂಗಾದ್ರೆ, ನಾನ್ ಕೇಳ್ತೀನಿ, ನಮ್ಮನೆ ಕೀ ತಕ್ಕೊಂಡು ಸ್ಲಮ್ಮಿಗ್ಯಾಕೆ ಹೋಗಿದ್ದೆ? ಅಷ್ಟೊತ್ತಲ್ಲೇ, ನಮ್ಮನೇಲಿ ನಿಂಗೇನು ಅಂತ ಕಷ್ಟ ಆಯ್ತು? ಹೇಳು! ಮಾತಾಡು! ಪಾಪ, ನಿಮ್ಮ ಮಾಮ ನೀನು ಇಷ್ಟೊಂದು ಚಾಲಾಕಿ ಅಂತಾನೂ ತಿಳಿಲಿಲ್ಲ!”

